**ಕರ್ನಾಟಕ ಸರ್ಕಾರ**

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ**

# ಸ್ವತ್ತಿನ ನಾಶ ಹಾಗೂ ನಷ್ಟ ಪ್ರತಿಬಂಧಕ ಅಧಿನಿಯಮ, 1981

ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟವಾಗಿದೆ.

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ,**

**ಅಧಿಸೂಚನೆ**

ಕ್ರಮಾಂಕ: ಲಾ 131 ಎಲ್.ಎಂಪಿ. 86 ಬೆಂಗಳೂರು, ದಿನಾಂಕ: 8.12.1986

ಕರ್ನಾಟಕ ರಾಜಭಾಷಾ ಅಧಿನಿಯಮ 1963 (ಕರ್ನಾಟಕ ಅಧಿನಿಯಮ 1963ರ 26)ರ 5–ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ನಾನು, ಶ್ರೀ ಎ.ಎನ್. ಬ್ಯಾನರ್ಜಿ, ಬೆಂಗಳೂರು **ಸ್ವತ್ತಿನ ನಾಶ ಹಾಗೂ ನಷ್ಟ ಪ್ರತಿಬಂಧಕ ಅಧಿನಿಯಮ, 1981**ರ ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಲಿಂಗಯ್ಯ**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ,
(ಆಡಳಿತ–2).

# ಸ್ವತ್ತಿನ ನಾಶ ಹಾಗೂ ನಷ್ಟ ಪ್ರತಿಬಂಧಕ ಅಧಿನಿಯಮ, 1981

## ವಿಷಯಾನುಕ್ರಮಣಿಕೆ


1. ಚಿಕ್ಕ ಹೆಸರು ಮತ್ತು ಪ್ರಾರಂಭ ... 1
2. ಸ್ವತ್ತಿಗೆ ಸಂಬಂಧಿಸಿದಂತೆ ಕೇಡು ಮಾಡಿದ್ದಕ್ಕಾಗಿ ಶಿಕ್ಷೆ ... 1
3. ಜಾಮೀನಿನ ಬಗ್ಗೆ ವಿಶೇಷ ಉಪಬಂಧ ... 2
4. ಸಾಮೂಹಿಕ ಜುಲ್ಮಾನೆಯನ್ನು ವಿಧಿಸಲು ರಾಜ್ಯ ಸರ್ಕಾರದ ಅಧಿಕಾರ ... 2
5. ನಿಯಮ ರಚನಾಧಿಕಾರ ... 4
6. ನಿರಸನ ಮತ್ತು ಉಳಿಸುವಿಕೆಗಳು ... 4

**1981ರ ಕರ್ನಾಟಕ ಅಧಿನಿಯಮ ಸಂಖ್ಯೆ 47**

**(1981ರ ಅಕ್ಟೋಬರ್ ಆರನೇ ದಿನದಂದು ಕರ್ನಾಟಕ ವಿಶೇಷ ರಾಜಪತ್ರದಲ್ಲಿ ಮೊದಲು ಪ್ರಕಟಿತವಾಗಿದೆ)**

**ಸ್ವತ್ತಿನ ನಾಶ ಹಾಗೂ ನಷ್ಟ ಪ್ರತಿಬಂಧಕ ಅಧಿನಿಯಮ, 1981**

**(1981ರ ಸೆಪ್ಟೆಂಬರ್ ಇಪ್ಪತ್ತೊಂಬತ್ತನೇ ದಿನದಂದು ರಾಷ್ಟ್ರಪತಿಯವರ ಅನುಮತಿ ಪಡೆದಿದೆ)**

ಸ್ವತ್ತಿಗೆ ಸಂಬಂಧಿಸಿದಂತೆ ಕೆಲವು ಕೃತ್ಯಗಳ ಶಿಕ್ಷೆಗಾಗಿ ಮತ್ತು ಅಂಥ ಕೃತ್ಯಗಳಿಂದ ಉಂಟಾದ ನಷ್ಟ ಅಥವಾ ಹಾನಿಯನ್ನು ವಸೂಲು ಮಾಡಲು ಸಾಮೂಹಿಕ ಜುಲ್ಮಾನೆಯನ್ನು ವಿಧಿಸುವುದಕ್ಕೆ ಉಪಬಂಧಿಸಲು ಅಧಿನಿಯಮ

ಸ್ವತ್ತಿಗೆ ಸಂಬಂಧಿಸಿದಂತೆ ಕೆಲವು ಕೃತ್ಯಗಳ ಶಿಕ್ಷೆಗಾಗಿ ಮತ್ತು ಅಂಥ ಕೃತ್ಯಗಳಿಂದ ಉಂಟಾದ ನಷ್ಟ ಅಥವಾ ಹಾನಿಯನ್ನು ವಸೂಲು ಮಾಡಲು ಸಾಮೂಹಿಕ ಜುಲ್ಮಾನೆಯನ್ನು ವಿಧಿಸುವುದಕ್ಕೆ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

1. **ಚಿಕ್ಕ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಸ್ವತ್ತಿನ ನಾಶ ಹಾಗೂ ನಷ್ಟ ಪ್ರತಿಬಂಧಕ ಅಧಿನಿಯಮ, 1981 ಎಂದು ಕರೆಯತಕ್ಕುದು.

(2) ಇದು 1981ರ ಜೂನ್ ಹದಿನಾರನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕುದು.

2. **ಸ್ವತ್ತಿಗೆ ಸಂಬಂಧಿಸಿದಂತೆ ಕೇಡು ಮಾಡಿದ್ದಕ್ಕಾಗಿ ಶಿಕ್ಷೆ:**- ಯಾರೇ ಆಗಲಿ,

(ಕ) ಯಾವುದೇ ಸ್ವತ್ತಿಗೆ ಭಾರತ ದಂಡ ಸಂಹಿತೆ 1860 (ಕೇಂದ್ರ ಅಧಿನಿಯಮ 1860ರ 45)ರ 425ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಕೇಡನ್ನು ಮಾಡಿದರೆ ಅಥವಾ ಮಾಡಲು ಪ್ರಯತ್ನಿಸಿದರೆ ಅಥವಾ ಪ್ರಚೋದಿಸಿದರೆ, ಚಿತಾಯಿಸಿದರೇ ಅಥವಾ ಇತರ ರೀತಿಯಲ್ಲಿ ದುಷ್ಪ್ರೇರಿಸಿದರೆ ಮತ್ತು ಹಾನಿ ಅಥವಾ ನಷ್ಟ ಉಂಟು ಮಾಡಿದರೆ, ಅಥವಾ

(ಖ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ, ಯಾವುದೇ ಪ್ರದೇಶದಲ್ಲಿ ಐದು ಅಥವಾ ಅದಕ್ಕೂ ಹೆಚ್ಚು ಜನರ ಕೂಟವು ಸೇರಕೂಡದೆಂದು ನಿಷೇಧಿಸಿದ ಅವಧಿಯಲ್ಲಿ, ಅಂಥ ಯಾವುದೇ ಪ್ರದೇಶದಲ್ಲಿ, ಯಾವುದೇ ಸ್ವತ್ತಿಗೆ ನಷ್ಟ ಅಥವಾ ಹಾನಿಯನ್ನುಂಟುಮಾಡಿದರೆ ಅಥವಾ ಭಾರತ ದಂಡ ಸಂಹಿತೆಯ 1860 (ಕೇಂದ್ರ ಅಧಿನಿಯಮ 1860ರ 45) 141ನೇ ಪ್ರಕರಣದ ಮೇರೆಗೆ ಅಂಥ ಕೂಟವನ್ನು ಕಾನೂನು ಬಾಹಿರ ಕೂಟವೆಂಬುದಾಗಿ ಭಾವಿಸಲಾಗಿರುವಲ್ಲಿ ಆರು ತಿಂಗಳಿಗೆ ಕಡಿಮೆಯಿರದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು;

ಪರಂತು, ನ್ಯಾಯಾಲಯವು ಬರಹದಲ್ಲಿ ಅಭಿಲೇಖಿಸಬೇಕಾದ ಕಾರಣಗಳಿಗಾಗಿ ಕಡಿಮೆ ಶಿಕ್ಷೆಯನ್ನು ವಿಧಿಸಬಹುದು.

3. **ಜಾಮೀನಿನ ಬಗ್ಗೆ ವಿಶೇಷ ಉಪಬಂಧ:**- 2ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದಿಂದ ಆರೋಪಿತನಾದ ಅಥವಾ ಅಪರಾಧಿ ಎಂದು ನಿರ್ಣಯಿತನಾದ ಯಾವನೇ ವ್ಯಕ್ತಿಯನ್ನು, ಅವನು ಅಭಿರಕ್ಷೆಯಲ್ಲಿದ್ದರೆ, ಅಂಥ ಬಿಡುಗಡೆಗಾಗಿ ಅರ್ಜಿಯನ್ನು ವಿರೋಧಿಸಲು ಪ್ರಾಸಿಕ್ಯೂಷನ್ನಿಗೆ ಅವಕಾಶವನ್ನು ಕೊಟ್ಟ ಹೊರತು, ಜಾಮೀನುದಾರರ ಸಹಿತ ಅಥವಾ ಜಾಮೀನುದಾರರು ಇಲ್ಲದೆಯೇ ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕುದಲ್ಲ;

ಪರಂತು, ನ್ಯಾಯಾಲಯವು ಅಭಿಲೇಖಿಸಬೇಕಾದ ಕಾರಣಗಳಿಗಾಗಿ, ಅಂಥ ಅವಕಾಶವನ್ನು ಕೊಡುವುದು ಕಾರ್ಯಸಾಧ್ಯವಲ್ಲವೆಂದು ಅಭಿಪ್ರಾಯಪಟ್ಟರೆ, ಅರ್ಜಿಯನ್ನು ವಿರೋಧಿಸಲು ಅಂಥ ಅವಕಾಶವನ್ನು ಕೊಡುವ ಅವಶ್ಯಕತೆ ಇರತಕ್ಕುದಲ್ಲ.

4. **ಸಾಮೂಹಿಕ ಜುಲ್ಮಾನೆಯನ್ನು ವಿಧಿಸಲು ರಾಜ್ಯ ಸರ್ಕಾರದ ಅಧಿಕಾರ:**-

(ಅ) ನಿಯಮಿಸಲಾದ ರೀತಿಯಲ್ಲಿ ವಿಚಾರಣೆಯನ್ನು ಮಾಡಿದ ತರುವಾಯ ರಾಜ್ಯ ಸರ್ಕಾರಕ್ಕೆ, ಒಂದು ಪ್ರದೇಶದ ನಿವಾಸಿಗಳು, 2ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕೆ ಸಂಬಂಧಿಸಿದ್ದಾರೆಂದು ಅಥವಾ ಅದನ್ನು ದುಷ್ಪ್ರೇರಿಸಿರುವರೆಂದು ಅಥವಾ ಪ್ರಚೋದಿಸಿರುವರೆಂದು ಅಥವಾ ಸದರಿ ಅಪರಾಧವನ್ನು ಮಾಡಲು ಸಂಬಂಧಪಟ್ಟ ವ್ಯಕ್ತಿಗಳಿಗೆ ಆಶ್ರಯ ನೀಡಿರುವರೆಂದು ಅಥವಾ ಅಪರಾಧಿಯನ್ನು ಅಥವಾ ಅಪರಾಧಿಗಳನ್ನು ಕಂಡುಹಿಡಿಯಲು ಅಥವಾ ದಸ್ತಗಿರಿ

ಮಾಡಲು ತಮ್ಮ ಕೈಲಾದ ಎಲ್ಲ ಸಹಾಯವನ್ನು ನೀಡಲು ತಪ್ಪಿರುವರೆಂದು ಅಥವಾ ಅಂಥ ಅಪರಾಧದ ಬಗ್ಗೆ ಮುಖ್ಯ ಸಾಕ್ಷ್ಯವನ್ನು ಅಡಗಿಸಿರುವರೆಂದು ಸಮಾಧಾನವಾದರೆ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ನಿವಾಸಿಗಳ ಮೇಲೆ ಸಾಮೂಹಿಕ ಜುಲ್ಮಾನೆಯನ್ನು ವಿಧಿಸಬಹುದು ಮತ್ತು ಅಂಥ ಜುಲ್ಮಾನೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ನಿವಾಸಿಗಳಲ್ಲಿ ಹಂಚಬಹುದು.

ಪರಂತು, ಹಾಗೆ ಹಂಚಲಾದ ಜುಲ್ಮಾನೆಯನ್ನು ಯಾವನೇ ನಿವಾಸಿಯಿಂದ (3)ನೇ ಉಪ-ಪ್ರಕರಣದ ಮೇರೆಗೆ ಅವನು ದಾಖಲ್ಮಾಡಲಾದ ಅರ್ಜಿ ಯಾವುದಾದರೂ ಇದ್ದರೆ ವಿಲೆ ಮಾಡುವವರೆಗೆ ವಸೂಲು ಮಾಡತಕ್ಕುದಲ್ಲ.

(2)(1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಅಧಿಸೂಚನೆಯನ್ನು ಆ ಪ್ರದೇಶದಲ್ಲಿ ಡಂಗುರ ಹೊಡೆಸುವ ಮೂಲಕ ಅಥವಾ ಸಾಮೂಹಿಕ ಜುಲ್ಮಾನೆಯನ್ನು ವಿಧಿಸಿರುವುದನ್ನು ಸದರಿ ಪ್ರದೇಶದ ನಿವಾಸಿಗಳ ಗಮನಕ್ಕೆ ತರಲು, ಆ ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ಅತಿ ಉತ್ತಮವೆಂದು ಭಾವಿಸಬಹುದಾದಂಥ ಇತರ ರೀತಿಯಲ್ಲಿ ಉದ್ಘೋಷಿಸತಕ್ಕುದು.

(3) (ಕ) (1)ನೇ ಉಪಪ್ರಕರಣದ ಮೇರೆಗೆ ಸಾಮೂಹಿಕ ಜುಲ್ಮಾನೆಯ ವಿಧಿಸುವಿಕೆಯಿಂದ ಅಥವಾ ಹಂಚಿಕೆಯ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಧಿಸೂಚನೆಯಾದ ಮೂವತ್ತು ದಿನಗಳೊಳಗಾಗಿ ಅಂಥ ಜುಲ್ಮಾನೆಯಿಂದ ವಿನಾಯಿತಿ ಪಡೆಯುವುದಕ್ಕಾಗಿ ಅಥವಾ ಅಂಥ ಹಂಚಿಕೆಯ ಆದೇಶವನ್ನು ಮಾರ್ಪಾಟು ಮಾಡುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಅಥವಾ ಅದು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರಾಧಿಕಾರಿಗೆ ಅರ್ಜಿ ಸಲ್ಲಿಸಬಹುದು. ಅಂಥ ಅರ್ಜಿಯನ್ನು ದಾಖಲ್ಮಾಡಲು ಯಾವುದೇ ಫೀಜನ್ನು ವಿಧಿಸತಕ್ಕುದಲ್ಲ;

(ಖ) ರಾಜ್ಯ ಸರ್ಕಾರವು ಅಥವಾ ಅದು ನಿರ್ದಿಷ್ಟಪಡಿಸಿದ ಪ್ರಾಧಿಕಾರಿಯು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ಕೊಟ್ಟ ತರುವಾಯ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡತಕ್ಕುದು;

ಪರಂತು, ಈ ಉಪಪ್ರಕರಣದ ಮೇರೆಗೆ ವಿನಾಯಿತಿಗೊಳಿಸಲಾದ ಅಥವಾ ಕಡಿಮೆ ಮಾಡಲಾದ ಜುಲ್ಮಾನೆಯ ಮೊಬಲಗನ್ನು ಯಾವನೇ ಇತರ ವ್ಯಕ್ತಿಯಿಂದ ವಸೂಲು ಮಾಡಬಹುದಾಗಿರತಕ್ಕುದಲ್ಲ ಮತ್ತು (1)ನೇ ಉಪಪ್ರಕರಣದ ಮೇರೆಗೆ ಆ ಪ್ರದೇಶದ ನಿವಾಸಿಗಳ ಮೇಲೆ ವಿಧಿಸಿದ ಜುಲ್ಮಾನೆಯ ಒಟ್ಟು ಮೊಬಲಗನ್ನು ಆ ಮಟ್ಟಿಗೆ ಕಡಿಮೆ ಮಾಡಲಾಗಿದೆ ಎಂದು ಭಾವಿಸತಕ್ಕುದು.

(4) (3)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ರಾಜ್ಯ ಸರ್ಕಾರವು, 2ನೇ ಪ್ರಕರಣದಲ್ಲಿ ಹೇಳಿದ ರೀತಿಯಲ್ಲಿ ಯಾರು ತಮ್ಮ ಸ್ವತ್ತಿನ ನಷ್ಟ ಅಥವಾ ಹಾನಿಯನ್ನು ಅನುಭವಿಸಿದ್ದಾರೋ ಆ ನಿವಾಸಿಗಳನ್ನು (1)ನೇ ಉಪಪ್ರಕರಣದ ಮೇರೆಗೆ ವಿಧಿಸಲಾದ ಸಾಮೂಹಿಕ ಜುಲ್ಮಾನೆಯನ್ನು ಅದರ ಯಾವುದೇ ಭಾಗವನ್ನು ಸಂದಾಯ ಮಾಡುವ ಹೊಣೆಯಿಂದ ವಿನಾಯಿತಿಗೊಳಿಸಬಹುದು.

(5) ರಾಜ್ಯ ಸರ್ಕಾರದ, ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾವು ಹಿಂದೆ ಹೇಳಿದ ನಷ್ಟ ಅಥವಾ ಹಾನಿಯನ್ನು ಅನುಭವಿಸಿದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ತನ್ನ ಅಭಿಪ್ರಾಯದಲ್ಲಿ ಸಂದಾಯ ಮಾಡಬಹುದಾದ ನಷ್ಟ ಪರಿಹಾರದ ಮೊಬಲಗನ್ನು ನಿರ್ಧರಿಸಬಹುದು ಮತ್ತು ಸಂಗ್ರಹಿಸಿದ ಜುಲ್ಮಾನೆಯಿಂದ ಅದನ್ನು ಸಂದಾಯ ಮಾಡಬಹುದು.

(6) ಯಾವನೇ ವ್ಯಕ್ತಿಯು ಸಂದಾಯ ಮಾಡಬೇಕಾದ ಸಾಮೂಹಿಕ ಜುಲ್ಮಾನೆಯ ಭಾಗವನ್ನು, ಮ್ಯಾಜಿಸ್ಟ್ರೇಟರನು ವಿಧಿಸಿದ ಜುಲ್ಮಾನೆಯಾಗಿದ್ದರೆ ಹೇಗೋ ಹಾಗೆ ನ್ಯಾಯಾಲಯವು ವಿಧಿಸಿದ ಜುಲ್ಮಾನೆಗಳ ವಸೂಲಿಗಾಗಿ ದಂಡ ಪ್ರಕ್ರಿಯಾ ಸಂಹಿತೆ, 1973ರಲ್ಲಿ ಉಪಬಂಧಿಸಲಾದ ರೀತಿಯಲ್ಲಿ ವಸೂಲು ಮಾಡಬಹುದು.

**5. ನಿಯಮ ರಚನಾಧಿಕಾರ:-** ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸಬಹುದು.

**6. ನಿರಸನ ಮತ್ತು ಉಳಿಸುವಿಕೆಗಳು:-** (1) ಸ್ವತ್ತಿನ ನಾಶ ಹಾಗೂ ನಷ್ಟ ಪ್ರತಿಬಂಧಕ ಅಧ್ಯಾದೇಶ, 1981ರ ಕರ್ನಾಟಕ ಅಧ್ಯಾದೇಶ (15)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸಿತವಾಗಿದ್ದಾಗ್ಯೂ ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕುದು.

* * * * * *